**ಕರ್ನಾಟಕ ವಿಧಾನ ಸಭೆ**

**ಹದಿನಾಲ್ಕನೇ ವಿಧಾನ ಸಭೆ**

**ಹದಿಮೂರನೇ ಅಧಿವೇಶನ**

# ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ, 2017

**(2017ರ ವಿಧಾನಸಭೆಯ ವಿಧೇಯಕ ಸಂಖ್ಯೆ-4)**

ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಾಗಿ ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು (1964ರ ಕರ್ನಾಟಕ ಅಧಿನಿಯಮ 12) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಅಧಿನಿಯಮ, 2017 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 94ಬಿ ಪ್ರಕರಣದ ತಿದ್ದುಪಡಿ.-** ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ (1964ರ ಕರ್ನಾಟಕ ಅಧಿನಿಯಮ 12) 94ಬಿ ಪ್ರಕರಣದ (1)ನೇ ಉಪಪ್ರಕರಣದ (iii)ನೇ ಖಂಡದಲ್ಲಿ "ಹದಿನಾರು ವರ್ಷಗಳೊಳಗೆ" ಎಂಬ ಪದಗಳಿಗೆ "ಹದಿನೆಂಟು ವರ್ಷಗಳೊಳಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು ಮತ್ತು ಹಾಗೆ ಯಾವಾಗಲೂ ಪ್ರತಿಯೋಜಿಸಲಾಗಿದೆ ಎಂದು ಭಾವಿಸತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕೆಲವು ಭೂಮಿಗಳ ಸಕ್ರಮಕ್ಕಾಗಿ ಸುಮಾರು 23,382 ಅರ್ಜಿಗಳು ನಮೂನೆ 50ರಲ್ಲಿ ಮತ್ತು 3,09,293 ಅರ್ಜಿಗಳು ನಮೂನೆ 53ರಲ್ಲಿ ವಿಲೇವಾರಿಗಾಗಿ ಇನ್ನೂ ಬಾಕಿಯಿದ್ದು, ಈ ಬಾಕಿಯಿರುವ ಅರ್ಜಿಗಳನ್ನು ವಿಲೇವಾರಿ ಮಾಡಲು ಅನುಕೂಲವಾಗುವಂತೆ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ 94ಬಿ ಪ್ರಕರಣವನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ. ಆದ್ದರಿಂದ ಮತ್ತೆ ಎರಡು ವರ್ಷಗಳಿಗೆ ಕಾಲಮಿತಿಯನ್ನು ವಿಸ್ತರಿಸುವುದು ಅವಶ್ಯಕವಾಗಿದೆ.

ಆದ್ದರಿಂದ ಈ ವಿಧೇಯಕ.

**ಆರ್ಥಿಕ ಜ್ಞಾಪನ ಪತ್ರ**

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಕಾಗೋಡು ತಿಮ್ಮಪ್ಪ**
ಕಂದಾಯ ಮಂತ್ರಿಗಳು

**ಎಸ್. ಮೂರ್ತಿ**
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನ ಸಭೆ

**ಅನುಬಂಧ**

**ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ (1964ರ ಕರ್ನಾಟಕ ಅಧಿನಿಯಮ 12) ಉದ್ಧೃತಭಾಗ**

XX XX XX

**94ಬಿ. ಕೆಲವು ಪ್ರಕರಣಗಳಲ್ಲಿ ಭೂ ಮಂಜೂರಾತಿ.–** (1) XX

(iii) ಕರ್ನಾಟಕ ಭೂ ಕಂದಾಯ ತಿದ್ದುಪಡಿ ಅಧಿನಿಯಮ, 1997ರ ಪ್ರಾರಂಭದ ದಿನಾಂಕದಂದು ವಾಸ್ತವವಾಗಿ ಅಧಿಭೋಗದಾರಿಕೆಯಲ್ಲಿ ಮುಂದುವರೆದಿದ್ದರೆ,

– ಜಿಲ್ಲಾಧಿಕಾರಿಯು ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಅಧಿನಿಯಮ, 2000ರ ಪ್ರಾರಂಭದ ದಿನಾಂಕದಿಂದ ಹದಿನಾರು ವರ್ಷಗಳೊಳಗೆ ಮತ್ತು ನಿಯಮಿಸಬಹುದಾದಂಥ ನಿಯಮಗಳಿಗೆ ಒಳಪಟ್ಟು ಮತ್ತು 94ಎ ಪ್ರಕರಣದ ಅಡಿಯಲ್ಲಿ ರಚಿಸಿದ ಸಮಿತಿಗೆ ಅಥವಾ ಸಂದರ್ಭಾನುಸಾರವಾಗಿ ಹೆಚ್ಚುವರಿ ಸಮಿತಿಗೆ ಮಾಡಿದ ಶಿಫಾರಸ್ಸು ಮಾಡಬಹುದು ಹಾಗೂ ಅಂಥ ಸಮಿತಿಯು ಆ ಶಿಫಾರಸ್ಸನ್ನು ಸ್ವೀಕರಿಸಿದ ಮೇಲೆ ಭೂಮಿಯನ್ನು ಅಂಥ ವ್ಯಕ್ತಿಗೆ ಮಂಜೂರು ಮಾಡಬಹುದು:

XX XX XX

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು, ಪಿ7, ಕಾಸೂ , 1000–ಪ್ರತಿಗಳು 8ನೇ ಫೆಬ್ರವರಿ, 2017, ಕಾ.ಸೂ. 1000

**KARNATAKA LEGISLATIVE ASSEMBLY**
**FOURTEENTH LEGISLATIVE ASSEMBLY**
**THIRTEENTH SESSION**

# THE KARNATAKA LAND REVENUE (AMENDMENT) BILL, 2017
## (L.A. Bill No. 4 of 2017)

A Bill further to amend the Karnataka Land Revenue Act, 1964.

Whereas, it is expedient further to amend the Karnataka Land Revenue Act, 1964 (Karnataka Act 12 of 1964) for the purposes hereinafter appearing;

Be it enacted by the Karnataka State Legislature in the Sixty eighth year of the Republic of India, as follows:-

**1. Short title and commencement.-** (1) This Act may be called the Karnataka Land Revenue (Amendment) Act, 2017.

(2) It shall come into force at once.

**2. Amendment of section 94-B.-** In the Karnataka Land Revenue Act, 1964 (Karnataka Act No. 12 of 1964) in section 94B in sub-section (1), in clause(iii), for the words "within sixteen years", the words "within eighteen years" shall be and shall always be deemed to have been substituted.

**STATEMENT OF OBJECTS AND REASONS**

It is considered necessary to amend the section 94 B of the Karnataka Land Revenue, Act, 1964 to facilitate disposal of pending applications for regularization of certain lands which are about 23,382 applications in form 50 and 3,09,293 applications in form 53 still pending for disposals. Therefore, it is necessary to extend the time limit by another two year.

Hence, the Bill.

## FINANCIAL MEMORANDUM

There is no extra expenditure involved in the proposed Legislative measure.

**KAGODU THIMMAPPA**
Minister for Revenue

**S.Murthy**
Secretary (I/C)
Karnataka Legislative Assembly

# ANNEXURE

## EXTRACT FROM THE KARNATAKA LAND REVENUE ACT, 1964

**(Karnataka Act 12 of 1964)**

XXX XXX XXX

**94B. Grant of land in certain cases.—(**1) XX XX XX

(iii) has continued to be in actual possession of such land on the date of commencement of the Karnataka Land Revenue (Amendment) Act, 1997:

-he may within sixteen years from the date of commencement of the Karnataka Land Revenue (Amendment) Act, 2000 and subject to such rules, as may be prescribed make recommendations to the Committee or the Additional Committee, as the case may be constituted under section 94A and such Committee may on receipt of the recommendation grant the land to such person:

**XXX XXX XXX**

Government Press, Vikasa Soudha Unit, Bengaluru 8st february, 2017 P7, W.D.1000, Copies 1000